ಹಾಗೂ ಉತ್ತಮ ಬೀಜಗಳನ್ನು ಖರೀದಿಸಿ ಗುಲ್ಬರ್ಗ ಜಿಲ್ಲೆಯ ರೈತರಿಗೆ ಪೂರೈಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಹತ್ತಿ ಬೀಜದ ಕೊರತೆ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಗುಲ್ಬರ್ಗಾ ಜಿಲ್ಲೆಗೆ ಎಷ್ಟು ಪೂರವಟಿ ಸಾಧ್ಯ ಅಷ್ಟು ಮಾಡುತ್ತೇನೆ. ಇಷ್ಟೇ ಅಲ್ಲದೆ ಗುಜರಾತ್, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಿಂದ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೩ ದಕ್ಷಿಣಕನ್ನಡ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಮತ್ತು ಜನತಾ ಬಜಾರ್‌ಗಳಲ್ಲಿ ಅಲ್ಪ ಸಂಖ್ಯಾತರು ಮತ್ತು ಪರಿಶಿಷ್ಟ ಜನಾಂಗದವರಿಗೆ ಪ್ರಾಶಿನಿಧ್ಯ ಕೊಡುವುದು.

ಶ್ರೀ ಬಿ. ಎಂ. ಇದಿನಬ್ಬ(ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣಕನ್ನಡ ಸೆಂಟ್ರಲ್ ಸಹಕಾರಿ ಬ್ಯಾಂಕ್ ನಲ್ಲಿಅದೇ ರೀತಿ ಮಂಗಳೂರು ಜನತಾ ಬಜಾರಿನಲ್ಲಿ ಸಿಬ್ಬಂದಿಗಳಲ್ಲಿ ಅಲ್ಪಸಂಖ್ಯಾತರು ಎಷ್ಟು ಜನರಿದ್ದಾರೆ ಅದೇ ರೀತಿ ಪರಿಶಿಷ್ಟ ವರ್ಗ ಮತ್ತು ಜನಾಂಗದ ಸಿಬ್ಬಂದಿಗಳು ಇದ್ದಾರೆಯೇ ? ಒಂದು ವೇಳೆ ಇಲ್ಲವಾದಲ್ಲಿ ಅವರ ದಾಮಾಶಯಂಕ್ಕನುಸರಿಸಿ ಸಿಬ್ಬಂದಿಗಳನ್ನು ತೆಗೆದುಕೊಳ್ಳುವಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೇ ? ಈ ಕುರಿತು ಮುಷ್ಕರ ವರ್ಗೆರೆ ನಡೆದಿದೆಯೇ ? ಈ ಬಗ್ಗೆ ಸಹಕಾರಿ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ನಂತರ ಉತ್ತರವನ್ನು ತರಿಸಿಕೊಡ ಲಾಗುವುದು.

೧೪ ಸಿರಸಿ ತಾಲ್ಲೂಕು ಭದ್ರಾಪುರದಲ್ಲಿ 16 ಮನೆಗಳು ಭಸ್ಮವಾಗಿದ್ದು ದರಿಂದ ಸಂಬಂಧ ಪಟ್ಟವರಿಗೆ ಪರಿಹಾರ ನೀಡುವುದು

ಶ್ರಿ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕು ಭದ್ರಾಪುರದಲ್ಲಿ ೧೫ ರಿಂದ ೧೬ ಮನೆಗಳು ಭಸ್ಮವಾಗಿ ಸುಮಾರು ೧೫–೧೬ ಕುಟುಂಬಗಳು ನಿರಾಶ್ರಿತರಾಗಿದ್ದಾರೆ. ಅವರಿಗೆ ಸರಕಾರದಿಂದ ಮನೆ ಹಾಗೂ ಪರಿಹಾರ ಒದಗಿಸಬೇಕು. ಹಾಗೂ ಇದರಲ್ಲಿ ಎಲ್ಲಾ ಕುಟುಂಬ ವರ್ಗದವರಿದ್ದಾರೆ, ಆದುದರಿಂದ ಇದನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ದಿನಾಂಕ ೨೩–೨–೧೯೮೮ರಂದು ಮಧ್ಯಾಹ್ನ ಸಿರಸಿ ತಾಲ್ಲೂಕು ಭದ್ರಾಪುರ ಗ್ರಾಮದಲ್ಲಿ ಆಕಸ್ಮಿಕ ಬೆಂಕಿಯಿಂದ ೧೬ ಗುಡಿಸಲುಗಳು ಸುಟ್ಟು ಅವರಲ್ಲಿ ತೆಂಗಿನ ಬೀಜ ಭತ್ತದ ಚೀಲ ಮನೆಯ ಸಾಮಾನು ಮತ್ತು ಆ ಮನೆಯ ದನದ ಕೊಟ್ಟಿಗೆಯಲ್ಲಿ ದ್ದಂತಹ ಒಂದು ಹಸು ಮತ್ತು ಕರು ಸುಟ್ಟು ಭಸ್ಮವಾಗಿವೆ. ದಿನಾಂಕ ೨೪–೨–೧೯೮೮ರಂದು ಸ್ಥಳೀಯ ಪೊಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳು ಸ್ಥಳಕ್ಕೆ ತಲುಪಿ ಪರಿಹಾರ ಕಾರ್ಯಕ್ರಮ ವನ್ನು ಕೈಗೊಂಡಿರುತ್ತಾರೆ, ಈ ಪ್ರಕರಣದಲ್ಲಿ ೨ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದ್ದು ರೆವಿನ್ಯೂ ಇಲಾಖೆ ಎರವರು ಇಲ್ಲಿಯವರೆಗೆ ೧೨ ೫೦೦ ರೂಪಾಯಿಗಳ ಪರಿಹಾರವನ್ನು ಒದಗಿಸಿದ್ದಾರೆ. ಮತ್ತೆ ಉಷ್ಟೂ ಮನೆಗಳನ್ನು ಕಟ್ಟಿಸಿಕೊಡಲು ಸುಮಾರು ೮,೫೫೦ ರೂಪಾಯಿಗಳ ಬೆಲೆ ಬಾಳುವ ಕಟ್ಟಡದ ಸಾಮಗ್ರಿಗಳನ್ನು ಒದಗಿಸಿಕೊಡುತ್ತಾರೆ.

೧೫ ರಾಜ್ಯದ ಶಾಲಾ ಕಾಲೇಜುಗಳ ಪ್ರಾರಂಭವನ್ನು ಜೂನ್ ತಿಂಗಳಲ್ಲಿ ಮಾಡುವಂತೆ ಜಾರಿಗೊಳಿಸುವ ಆಜ್ಞೆಯನ್ನು ಪ್ರಚಾರ ಪಡಿಸುವುದು.

ಜಿ. ಎಸ್. [illegible].—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಲಕ್ಷಾಂತರ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೇಳುವ ಪ್ರಶ್ನೆ ಶಾಲೆಗಳ ಪ್ರಾರಂಭ ಎಂದಿಗೆ ? ಕಳೆದ ವರ್ಷ ನಿಯೋಜಿಸಿದಂತೆ ಮೇ ತಿಂಗಳ ಮಧ್ಯಭಾಗದಲ್ಲಿ ಶಾಲೆಗಳಲ್ಲಿ ತರಗತಿಗಳು ಪ್ರಾರಂಭ ಆಗಬೇಕು. ಉರಿಬಿಸಲು, ವಿಪರೀತ